5275(6177) ಶ್ರೀ ಕೃಷ್ಣ ಪಾಲೇಮಾರ್. ಜಿ (ಸುರತ್ಕಲ್) ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಸರ್ಕಾರಿ ಭೂಮಿಯನ್ನು ಸದುದ್ದೇಶಗಳಿಗಾಗಿ ಮಂಜೂರು ಮಾಡಲು ಅನುಸರಿಸುತ್ತಿರುವ ನಿಯಮಗಳೇನು;

ಆ) ಸರ್ಕಾರದಿಂದ ಪಡೆದ ದರ್ಖಾಸ್ತು ನಿವೇಶನಗಳು, ಮುಂತಾದ ಜಮೀನುಗಳನ್ನು ಪರಭಾರೆ ಮಾಡುವಲ್ಲಿ ಹಿಂದೆ ನಿಗಧಿಪಡಿಸಿದ್ದ ಕಾಲಮಿತಿ ಎಷ್ಟು ವರ್ಷಗಳು ಹಾಗೂ ಈಗ ಆದೇಶದನ್ವಯ ಎಷ್ಟು ವರ್ಷಗಳು;

ಇ) ಸರ್ಕಾರ ನೀಡಿದ ಜಮೀನಿನ ಪರಭಾರೆ ಮಾಡುವ ಬಗ್ಗೆ ಕಾಲಮಿತಿಯನ್ನು ನಿಗದಿಪಡಿಸುವ ಉದ್ದೇಶಗಳೇನು?

ಶ್ರೀ ಎಂ.ಪಿ.ಪ್ರಕಾಶ್ (ಕಂದಾಯ ಸಚಿವರು) :

ಅ) ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ ಮತ್ತು ಇತ್ತೀಚೆಗೆ ಸದರಿ ನಿಯಮಗಳಿಗೆ ಈ ಕೆಳಕಂಡ ಮಾನದಂಡಗಳನ್ನು ಅನುಸರಿಸಲಾಗುತ್ತಿದೆ.

i) ಯಾವುದೇ ಸ್ವಯಂ ಸೇವಾ ಸಂಸ್ಥೆ ಅಥವಾ ಸಂಘ ಸಂಸ್ಥೆಗಳಿಗೆ ಭೂ ಮಂಜೂರಾತಿ ಅರ್ಜಿ ಸಲ್ಲಿಸಿದ ದಿನಾಂಕದ ಹಿಂದಿನಿಂದ ಸದರಿ ಸಂಸ್ಥೆಯು ಸತತವಾಗಿ 5 ವರ್ಷಗಳ ಹಿಂದಿನಿಂದ, ಅಸ್ತಿತ್ವದಲ್ಲಿರಬೇಕು.

ii) ಭೂ ಮಂಜೂರಾತಿಯ ನಿರ್ದಿಷ್ಟ ಉದ್ದೇಶವನ್ನು ಘೋಷಿಸಬೇಕು. ಸದರಿ ಉದ್ದೇಶಕ್ಕಾಗಿ ಮಂಜೂರಾತಿ ಪಡಿಸಿದ ಜಮೀನನ್ನು ಕೂಡಲೇ ಉಪಯೋಗಿಸಿ ಕೊಳ್ಳಲು ಸದರಿ ಸಂಸ್ಥೆಗೆ ಸಾಮರ್ಥ್ಯವಿದೆಯೆಂದು ಸಾಬೀತು ಪಡಿಸಲು 5 ವರ್ಷಗಳ ಹಿಂದಿನ ಆಡಿಟ್ ಲೆಕ್ಕ ಪತ್ರಗಳನ್ನು ಮತ್ತು ವಾರ್ಷಿಕ ವರದಿಯನ್ನು ಒಪ್ಪಿಸುವುದು.

iii) ಯಾವ ಉದ್ದೇಶಕ್ಕೆ ಜಮೀನು ಅವಶ್ಯಕತೆಯಿದೆಯೋ ಆ ಉದ್ದೇಶಕ್ಕೆ ಸಂಬಂಧಿಸಿದಂತೆ ಕಾರ್ಯ ಚಟುವಟಿಕೆಗಳಲ್ಲಿ ಸದರಿ ಸಂಸ್ಥೆಗಿರುವ ಅನುಭವಗಳ ಬಗ್ಗೆ ಸಂಬಂಧಿಸಿದ ಇಲಾಖೆಯಿಂದ ಪಡೆದ ದೃಡೀಕರಣ ಪತ್ರಗಳನ್ನು ಒಪ್ಪಿಸುವುದು.

iv) ಯಾವ ಉದ್ದೇಶಕ್ಕೆ ಜಮೀನಿನ ಅವಶ್ಯಕತೆಯಿದೆಯೋ ಆ ಉದ್ದೇಶಕ್ಕೆ ಸಂಬಂಧಿಸಿದ ಯೋಜನೆ ಮತ್ತು ಅಂದಾಜು ವೆಚ್ಚಗಳ ಮಾಹಿತಿಯನ್ನು ಒಪ್ಪಿಸುವುದು.

v) ಕರ್ನಾಟದ ಭೂ ಕಂದಾಯ ನಿಯಮಾವಳಿ 1966ರ ನಿಯಮ 108–1ಗೆ ತಂದಿರುವ ತಿದ್ದುಪಡಿ ಅನ್ವಯ ನಗರ ಮತ್ತು ಪಟ್ಟಣ ವ್ಯಾಪ್ತಿಯಲ್ಲಿ ಬರುವ ಸರ್ಕಾರಿ ಜಮೀನುಗಳನ್ನು ಯಾವುದೇ ಖಾಸಗಿ ವ್ಯಕ್ತಿಗಳಿಗೆ ಅಥವಾ ಸಂಘ ಸಂಸ್ಥೆಗಳಿಗೆ ಮಂಜೂರಾತಿಸಲು ಆಸ್ಪದವಿಲ್ಲ. ಈ ಜಮೀನುಗಳನ್ನು ನಗರ ಮತ್ತು ಪಟ್ಟಣಗಳ ಅಭಿವೃದ್ಧಿಗೆ ಸರ್ಕಾರಿ ಮತ್ತು ಸಾರ್ವಜನಿಕ ಉದ್ದೇಶಗಳಿಗೆ ಮೀಸಲಿಡಲು ಅವಕಾಶ ಕಲ್ಪಿಸಲಾಗಿದೆ.

ಆ) ಕರ್ನಾಟಕ ಭೂ ಮಂಜೂರಾತಿ ನಿಯಮಾವಳಿ, ನಿಯಮ 9ರನ್ವಯ ದರಖಾಸ್ತು ಮೂಲಕ ಮಂಜೂರಾದ ನಿವೇಶನಗಳನ್ನು ಮತ್ತು ಜಮೀನುಗಳನ್ನು ಪರಭಾರೆ ಮಾಡಲು ಪರಭಾರೆ ನಿಷೇಧ ಅವಧಿಯು 15 ವರ್ಷಗಳನ್ನು ನಿಗಧಿ ಪಡಿಸಲಾಗಿದ್ದು ಸದರಿ ನಿಯಮಗಳಿಗೆ ತಂದಿರುವ ತಿದ್ದುಪಡಿಯ್ವಯ ಪರಭಾರೆ ನಿಷೇಧ ಅವಧಿಯನ್ನು 25 ವರ್ಷಗಳೆಂದು ನಿಗಧಿಪಡಿಸಲಾಗಿದೆ.

ಇ) 1) ಯಾವ ಉದ್ದೇಶಕ್ಕಾಗಿ ಜಮೀನನ್ನು ಮಂಜೂರು ಮಾಡಲಾಗಿದೆಯೋ ಆ ಉದ್ದೇಶಕ್ಕೆ ಸರ್ಕಾರಿ ಜಮೀನು ಬಳಕೆ ಆಗಬೇಕು.

2) ದರಖಾಸ್ತು ಮೂಲಕ ಮಂಜೂರಾತಿಸಿದ ಜಮೀನನ್ನು ಭೂರಹಿತರು ಕೃಷಿಗೆ ಉಪಯೋಗಿಸಿಕೊಂಡು ತಮ್ಮ ಜೀವನ ಸಾಗಿಸಿಕೊಂಡು ಹೋಗಲು ಮತ್ತು ಜೀವನ ಮಟ್ಟವನ್ನು ಸುಧಾರಿಸಿಕೊಳ್ಳುವ ಉದ್ದೇಶದಿಂದ ಹಾಗೂ ನಿವೇಶನ ಉದ್ದೇಶಕ್ಕೆ ನೀಡಿರುವ ಜಮೀನನ್ನು ನಿವೇಶನಕ್ಕೆ ಉಪಯೋಗಿಸಿಕೊಳ್ಳಲು ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಜನರಿಗೆ ಮಂಜೂರಾತಿಸಿದ ನಿವೇಶನವನ್ನಾಗಲಿ ಅಥವಾ ಜಮೀನನ್ನಾಗಲಿ ಪ್ರಭಾವಿ ವ್ಯಕ್ತಿಗಳು ಅವರ ಆರ್ಥಿಕ ಪರಿಸ್ಥಿತಿ ದುರುಪಯೋಗಪಡಿಸಿಕೊಂಡು ಹಣದ ಆಸೆ ತೋರಿಸಿ ಸದರಿ ಜಮೀನನ್ನು ಕ್ರಯಕ್ಕೆ ಪಡೆಯುವುದನ್ನು ತಡೆಗಟ್ಟಲು ಕಾಲಮಿತಿಯನ್ನು ನಿಗಧಿಪಡಿಸಲಾಗಿದೆ.

5276(6178) ಶ್ರೀ ಕೃಷ್ಣ ಪಾಲೇಮಾರ್. ಜೆ.(ಸುರತ್ಕಲ್) ಮಾನ್ಯ ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ ?

ಅ) ರಾಜ್ಯದಲ್ಲಿನ ಎಲ್ಲಾ ಐಟಿಐ ಮತ್ತು ಸರ್ಕಾರಿ ಪಾಲಿಟೆಕ್ನಿಕ್‌ಗಳಲ್ಲಿ ವ್ಯಾಸಂಗ ಮಾಡುತ್ತಿರುವ ಕಾರ್ಮಿಕರ ಮಕ್ಕಳಿಗೆ ಉಚಿತ ಶಿಕ್ಷಣ ನೀಡುವ ಯೋಜನೆಗಳ್ನನು ಸರ್ಕಾರ ಅನುಷ್ಟಾನಗೊಳಿಸಿದೆಯೇ;

ಆ) ಹಾಗಿದ್ದಲ್ಲಿ ಅದರ ವಿವರಗಳೇನು;

ಇ) ಈ ಯೋಜನೆಯ ಸೌಲಭ್ಯವನ್ನು ಎಷ್ಟು ಕಾರ್ಮಿಕರ ಮಕ್ಕಳು ಪಡೆಯಲಿದ್ದಾರೆ;

ಈ) ಈ ಯೋಜನೆಗಾಗಿ ಸರ್ಕಾರ ಎಷ್ಟು ಮೊತ್ತದ ಹಣವನ್ನು ವೆಚ್ಚಮಾಡಲು ನಿರ್ಧರಿಸಿದೆ.

ಉ) ಕಾರ್ಮಿಕರ ಕಲ್ಯಾಣಕ್ಕಾಗಿರುವ ಈ ಯೋಜನೆಯನ್ನು ಸಮರ್ಪಕವಾದ ರೀತಿಯಲ್ಲಿ ಜಾರಿಗೆ ತರಲು ಸರ್ಕಾರ ಕ್ರಮ ಕೈಗೊಳ್ಳುವುದೇ?

ಶ್ರೀ ತನ್ವೀರ್ ಸೇಠ್ (ಕಾರ್ಮಿಕ ಮತ್ತು ಹಜ್ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

ಇ) ಉದ್ಭವಿಸುವುದಿಲ್ಲ.

ಈ) ಉದ್ಭವಿಸುವುದಿಲ್ಲ.

ಉ) ಉದ್ಭವಿಸುವುದಿಲ್ಲ.

5277(5807) ಶ್ರೀ ಮಲ್ಲಿಕಾರ್ಜುನ ಸಿದ್ರಾಮಪ್ಪ ಖೂಬ (ಬಸವಕಲ್ಯಾಣ) ಮಾನ್ಯಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬೀದರ್ ಜಿಲ್ಲೆಯಲ್ಲಿನ ಎಷ್ಟು ರೈತರ ಅಕ್ರಮ ವಿದ್ಯುತ್ ಬಳಕೆಯ ಪಂಪುಸೆಟ್ಟುಗಳನ್ನು ಸಕ್ರಮ ಗೊಳಿಸಲಾಗಿದೆ (ತಾಲ್ಲೂಕುವಾರು ಮಾಹಿತಿ ಒದಗಿಸುವುದು) ;

ಆ) ಇನ್ನೂ ಸಕ್ರಮಗೊಳಿಸುವಿಕೆಯ ಪ್ರಕ್ರಿಯೆಯಲ್ಲಿ ಉಳಿದಿರುವ ಪಂಪುಸೆಟ್ಟುಗಳ ಸಂಖ್ಯೆಯನ್ನು ಗುರುತಿಸಲಾಗಿದೆಯೇ;